

ಮಿಸ್ ಇಂಡಿಯ, ಮಿಸಸ್ ಇಂಡಿಯ ಆಯ್ತು. ಈಗ 'ಇಂಡಿಯನ್ ಸೂಪರ್ ಕ್ವೀನ್' ಗಾಗಿ ಹುಡುಕಾಟ ಶುರುವಾಗಿದೆ. ಈ ಸ್ಪರ್ಧೆಗೆ ಸಣ್ಣ ವಯಸ್ಸಿನ ಯುವತಿಯರು ಭಾಗವಹಿಸಬೇಕೋ, ಮದುವೆಯಾದ ಮಹಿಳೆಯರೂ ಮುಖ ತೋರಿಸಬಹುದೋ ಎಂಬ ಚೌಕಾಶಿಗಿಂತ ಮುನ್ನ ಒಂದು ಮಾತು, ಇದು ಪ್ರತಿಭಾವಂತರಿಗೆ ಮಾತ್ರ. ಅದೂ ಪ್ರತಿಭಾವಂತ ಹಿಜ್ರಾಗಳಿಗೆ ಮಾತ್ರ. ಸ್ಪರ್ಧೆಯಲ್ಲಿ ಯಾವ್ಯಾವ ಸುತ್ತುಗಳಿವೆ ಎಂದು ಲೆಕ್ಕಾಚಾರ ಹಾಕಬೇಡಿ, ಈಗಾಗಲೇ ಬೆಂಗಳೂರು ವಿಭಾಗದ ಸ್ಪರ್ಧೆ ಮುಗಿದುಹೋಗಿದೆ.

ಬೀಜಿಂಗ್‌ನ ಈ ಥೀಮ್‌ಪಾರ್ಕ್‌ಗೆ ಬಂದವರ ಬಾಯಲ್ಲಿ ನೀರೋ ನೀರು. ಎಲ್ಲಾ ಕಡೆ ನಿಲ್ಲಿಸಿರುವ ವಿಗ್ರಹಗಳನ್ನು ನೋಡಿ ಕಣ್ತುಂಬಿಕೊಳ್ಳುವ ಬದಲು ಬಾಯ್ತುಂಬಿಕೊಳ್ಳುವ ಆಸೆ. ವಿಗ್ರಹಗಳೆಲ್ಲ ಚಾಕೊಲೇಟ್‌ನಿಂದ ತಯಾರಾದವು. ಸಣ್ಣವು, ಆಳೆತ್ತರದವು.. ಕೈಬೆರಳಲ್ಲಿ ಮುಟ್ಟಿ ಬಾಯಲ್ಲಿ ಇಡುವ ಹಾಗೂ ಇಲ್ಲ.



ಈತ ಮಾರ್ಕಸ್. ಅಮೆರಿಕದ ನೆವಾಡಾದ ವೇಶ್ಯಾಗೃಹದ ಮೊದಲ ಅಧಿಕೃತ ಪುರುಷ ವೇಶ್ಯೆ. ಅಶ್ಲೀಲ ಚಿತ್ರಗಳಲ್ಲಿ ನಟಿಸಿ ಬೇಸತ್ತ ಮಾರ್ಕಸ್ ಈ ಹೊಸ ಉದ್ಯೋಗದಿಂದ ಕೈತುಂಬ ಹಣ, ಹೆಸರು ಗಳಿಸುತ್ತಿದ್ದಾನಂತೆ.



ಹಾಲಿಡೇ ಇನ್ ಅಂತರರಾಷ್ಟ್ರೀಯ ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ಹೊಸ ಸೇವೆ ಆರಂಭಿಸಲಾಗಿದೆ. ತಣ್ಣಗಿನ ಕೊರೆಯುವ ಹಾಸಿಗೆಗಳನ್ನು ಬಿಸಿ ಮಾಡಲು ಬಿಸಿನೀರು ಬಾಟಲ್ ಬದಲು ಹೋಟೆಲ್ ಸಿಬ್ಬಂದಿಯನ್ನೇ ಬಳಸಲಾಗುತ್ತಿದೆ. ಗ್ರಾಹಕರು ಕನಸು ಕಾಣಲು ಆರಂಭಿಸಬೇಡಿ. ಗ್ರಾಹಕರು ಹೋಟೆಲ್ ಕೋಣೆಯೊಳಗೆ ಕಾಲಿಡುವ ಮುನ್ನ ಸಿಬ್ಬಂದಿ ಹಾಸಿಗೆಯಲ್ಲಿ ಮಲಗಿ ಬೆಚ್ಚಗೆ ಮಾಡಿ ಹೋಗುತ್ತಾರಂತೆ. ಇಶ್ಶೀ ಎಂದು ಮುಖ ಸಿಂಡರಿಸುವ ಸರದಿ ಈಗ ಯಾರದ್ದು?



ಬೆಂಗಳೂರಿನ ಬೀದಿಗಳಲ್ಲಿ ಒಣಹಣ್ಣುಗಳು ಗಾಡಿಗಳಲ್ಲಿ ಭರಪೂರು ಮಾರಾಟವಾಗುತ್ತವೆ. ಥಾಯ್ಲೆಂಡ್‌ನಲ್ಲೂ ಈ ಗಾಡಿಗಳ ವ್ಯಾಪಾರ ಬಲು ಜೋರು. ಆದರೆ ಆ ಗಾಡಿಗಳಲ್ಲಿ ಇರುವುದು ಒಣಗಿದ ಜೀರುಂಡೆ, ಚೇಳು, ಜಿರಲೆ, ರೇಷ್ಮೆ ಹುಳು... ಉಪ್ಪು, ಖಾರ ಹಾಕಿ ಹುರಿದು ಕೊಟ್ಟರೆ ಅದೇ ಮಂಚೂರಿ. ಬೆಂಗಳೂರಿನ ಭೋಜನಪ್ರಿಯರು ಯಾವಾಗ ಈ ಹರಿದಾಡುವ ಭಕ್ಷ್ಯದ ರುಚಿ ನೋಡುವುದು?

ಬ್ರಿಟನ್ನಿನಲ್ಲಿ ಇನ್ನು ಮುಂದೆ ದಂಪತಿ ಪ್ರೀತಿ- ಪ್ರೇಮ ಮಾಡುವಾಗ ಸದ್ದು ಮಾಡಬಾರದಂತೆ. ಅದು ಸಮಾಜ ವಿರೋಧಿ ಎಂದು ಹಣೆಪಟ್ಟಿ ನೀಡಿರುವ ಕೋರ್ಟ್, ಸದ್ದು ಮಾಡುವ ದಂಪತಿಯನ್ನು ಕಂಬಿಯ ಹಿಂದೆ ಹಾಕಲು ಆದೇಶ ನೀಡಿದೆಯಂತೆ. ದಂಪತಿಯನ್ನು ಒಂದೇ ಜೈಲು ಕೋಣೆಯಲ್ಲಿಡುತ್ತಾರಾ, ಕಂಬಿಯ ಹಿಂದೆ ಸದ್ದು ಮಾಡಬಹುದಾ ಎಂಬ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ.

ಟೆಕ್ಸಾಸ್‌ಗೆ ಬಂದಿಳಿದ ಮೆಕ್ಸಿಕೊ ಮಹಿಳೆಯನ್ನು ಕಸ್ಟಮ್ಸ್‌ನವರು ಹಿಡಿದುಕೊಂಡರು. ಆಕೆಯ ಕೋಟಿನ ಮೇಲೆ ಅಮೂಲ್ಯ ಹರಳಿನ ಪದಕ ಹೊಳೆಯುತ್ತಿತ್ತು. ಆದರೆ ಅದನ್ನು ಮುಟ್ಟಿದ ಅವರು ಪದಕದ ಅಡಿಯಲ್ಲಿರುವ ಜೀವಂತ ಜೀರುಂಡೆಯನ್ನು ವಶಕ್ಕೆ ತೆಗೆದುಕೊಂಡರು. ಮಹಿಳೆಗೆ ಅದು ಅಲಂಕಾರದ ವಸ್ತು, ಕಸ್ಟಮ್ಸ್ ಪೊಲೀಸರಿಗೆ?



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65